# ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು

## ಅಧಿಸೂಚನೆ

ಸಂಖ್ಯೆ:ಕಂ/2/ಚುನಾವಣೆ/20/2009-10 ದಿನಾಂಕ:18-01-2010

1993 ರ ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ (ಕರ್ನಾಟಕ ಅಧಿನಿಯಮ 14) 5ನೇ ಪ್ರಕರಣದ ಉಪಪ್ರಕರಣ (5) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಾಯಚೂರು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಕ್ಷೇತ್ರಗಳಾಗಿ ವಿಭಜಿಸಿ ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ. ಕೋಷ್ಟಕ-Iರ ಅಂಕಣ (2)ರಲ್ಲಿ ಕ್ಷೇತ್ರದ ಹೆಸರುಗಳನ್ನು, ಅಂಕಣ (3) ರಲ್ಲಿ ಪ್ರತಿ ಕ್ಷೇತ್ರದ ವ್ಯಾಪ್ತಿಯನ್ನು ಹಾಗೂ ಅಂಕಣ (4) ರಲ್ಲಿ ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸ್ಥಾನಗಳ ಸಂಖ್ಯೆಗಳನ್ನು ಹೇಳಲಾಗಿದೆ. ಕೋಷ್ಟಕ-II ರ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸ್ಥಾನಗಳನ್ನು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ಅ,ಬ ವರ್ಗಗಳಿಗೆ ಸೇರಿದವರಿಗೆ ಮೀಸಲಿಡಲಾಗಿದೆ. ಹಾಗೂ ಹೀಗೆ ಮೀಸಲಿಡಲಾದ ಸ್ಥಾನಗಳ ಪೈಕಿ ಮಹಿಳೆಯರಿಗಾಗಿ (3)ನೇ ಅಂಕಣದಲ್ಲಿ ನಮೂದಿಸಿರುವ ಮೀಸಲಿಡಲಾದ ಚುನಾವಣೆ ಕ್ಷೇತ್ರಗಳನ್ನು ನಿರ್ದಿಷ್ಟಪಡಿಸಲಾಗಿದೆ. ಕೋಷ್ಟಕ-III ರ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾದೇಶಿಕ ಚುನಾವಣೆ ಕ್ಷೇತ್ರದ ಸ್ಥಾನಗಳನ್ನು ಮೀಸಲಿಟ್ಟಿರುವುದಿಲ್ಲ ಮತ್ತು ಪ್ರಾದೇಶಿಕ ಚುನಾವಣೆ ಕ್ಷೇತ್ರದಲ್ಲಿ ಮೀಸಲಿಡದ ಸ್ಥಾನಗಳ ಪೈಕಿ ಅಂಕಣ(3) ರಲ್ಲಿ ನಿರ್ದಿಷ್ಟಪಡಿಸಿದ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ.

ಜಿಲ್ಲಾಧಿಕಾರಿಗಳು

ರಾಯಚೂರು